2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರವಿ ಎಸ್ | ಪಿಡಬ್ಲೂ -12 |
| ತಂದೆಯ ಹೆಸರು | - | ಸಿದ್ದಯ್ಯ | ಸಿ ಡಬ್ಲ್ಯು 29 |
| ವಯಸ್ಸು | - | 35 ವರ್ಷ | |
| ಉದ್ಯೋಗ | - | ಪೇದೆ,<br>ಬಸವನಹಳ್ಳಿ ಪೊಲೀಸ್ ಠಾಣೆ | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 20-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2017 ನೇ ಇಸವಿಯಿಂದ ಇಲ್ಲಿಯವರೆಗೆ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 23.09.2021 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಾ.11 ರವರು ಕೃತ್ಯ ನಡೆದ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಅವರು ಸದರಿ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಅವರು ನನಗೆ ಮೌಖಿಕವಾಗಿ ಆದೇಶಿಸಿದ್ದ ಮೇರೆಗೆ ಇಲಾಖಾ ವತಿಯಿಂದ ಠಾಣೆಗೆ ಒದಗಿಸಲಾಗಿದ್ದ ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.3 ರಿಂದ ನಿಪಿ.6 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ದಿನಾಂಕ 23.09.2021 ರಂದು ಕೃತ್ಯ ನಡೆದ ಸ್ಥಳದಲ್ಲಿ ತೆಗೆದ

ಫೋಟೋಗಳು ಅವೇ ಎಂದು ನುಡಿದಿರುತ್ತಾರೆ.

3. ದಿನಾಂಕ 24.09.2021 ರಂದು ತನಿಖಾಧಿಕಾರಿಗಳಾದ ಚಾಸಾ.33 ರವರ ಆದೇಶದ ಮೇರೆಗೆ ನಾನು ಅವರೊಂದಿಗೆ ಚಿಕ್ಕಮಗಳೂರಿನ ಎಂ ಜಿ ಆಸ್ಪತ್ರೆಯ ಶವಾಗಾರಕ್ಕೆ ಹೋಗಿರುತ್ತೇನೆ. ಅಲ್ಲಿ ಚಾಸಾ.33 ರವರು ಶವ ಪಂಚನಾಮೆಯನ್ನು ಜರುಗಿಸುವ ಸಮಯದಲ್ಲಿ ಅವರ ಸೂಚನೆಯ ಮೇರೆಗೆ ಮೇಲೆ ಹೇಳಿದಂತೆ ಇಲಾಖಾ ವತಿಯಿಂದ ಠಾಣೆಗೆ ಒದಗಿಸಲಾಗಿದ್ದ ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.7 ರಿಂದ ನಿಪಿ.10 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ದಿನಾಂಕ 24.09.2021 ರಂದು ಶವ ತನಿಖಾ ಕಾಲದಲ್ಲಿ ತೆಗೆದ ಫೋಟೋಗಳು ಅವೇ ಎಂದು ನುಡಿದಿರುತ್ತಾರೆ.

4. ನಂತರ ಅದೇ ದಿನ ಅಂದರೆ ದಿನಾಂಕ 24.09.2021 ರಂದು ಆರೋಪಿ ತೋರಿಸಿದಂತೆ ತನಿಖಾಧಿಕಾರಿಗಳಾದ ಚಾಸಾ.33 ರವರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿದ್ದು, ಆ ಸಮಯದಲ್ಲಿ ಚಾಸಾ.33 ರವರ ಸೂಚನೆಯ ಮೇರೆಗೆ ಮೇಲೆ ಹೇಳಿದಂತೆ ಇಲಾಖಾ ವತಿಯಿಂದ ಠಾಣೆಗೆ ಒದಗಿಸಲಾಗಿದ್ದ ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.18 ಎಂದು ಗುರುತಿಸಲ್ಪಟ್ಟಿರುವ ಫೋಟೋವನ್ನು ನೋಡಿ ದಿನಾಂಕ

24.09.2021 ರಂದು ಆರೋಪಿ ತೋರಿಸಿದಂತೆ ಕೃತ್ಯ ನಡೆದ ಸ್ಥಳದಲ್ಲಿ ತನಿಖಾಧಿಕಾರಿಗಳು ಪಂಚನಾಮೆಯನ್ನು ಜರುಗಿಸಿದ ಸಮಯದಲ್ಲಿ ತೆಗೆದ ಫೋಟೋ ಅದೇ ಎಂದು ನುಡಿದಿರುತ್ತಾರೆ.

5. ದಿನಾಂಕ 25.09.2021 ರಂದು ಬಸವನಹಳ್ಳಿ ವೃತ್ತ ಕಛೇರಿಗೆ ತೆರಳಿ ಮೇಲೆ ಹೇಳಿದಂತೆ ಡಿಜಿಟಲ್ ಕ್ಯಾಮೆರಾದಲ್ಲಿ ತೆಗೆದಿದ್ದ ಫೋಟೋಗಳನ್ನು ಸದರಿ ಕಛೇರಿಯಲ್ಲಿದ್ದ ಕಂಪ್ಯೂಟರ್ ಗೆ ಯಥಾಸ್ಥಿತಿಯಲ್ಲಿ ಡೇಟಾ ಕೇಬಲ್ ಮೂಲಕ ವರ್ಗಾಯಿಸಿ ನಂತರ ಸದರಿ ಫೋಟೋಗಳನ್ನು ಒಂದು ಖಾಲಿ ಸಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿರುತ್ತೇನೆ ಮತ್ತು ಸದರಿ ಫೋಟೋಗಳನ್ನು ಪ್ರಿಂಟ್ ಹಾಕಿಸಿ ಅವುಗಳನ್ನು ಮತ್ತು ಅವುಗಳನ್ನು ವರ್ಗಾಯಿಸಿದ ಸಿಡಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಮತ್ತು ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನೂ ಸಹ ನೀಡಿರುತ್ತೇನೆ.

6. ಸದರಿ ಸಿಡಿ ಮತ್ತು ದೃಢೀಕರಣ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ.26 ಮತ್ತು ನಿಪಿ.27 ಎಂದು ಗುರುತಿಸಲಾಯಿತು. ನಿಪಿ.27 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು.

7. ಸದರಿ ಫೋಟೋಗಳನ್ನು ತೆಗೆಯುವ ಸಮಯದಲ್ಲಿ ಕ್ಯಾಮೆರಾ ಸುಸ್ಥಿತಿಯಲ್ಲಿ ಇತ್ತು ಮತ್ತು ಅವುಗಳನ್ನು ಮೇಲೆ ಹೇಳಿದಂತೆ ವರ್ಗಾಯಿಸಿದ ಕಂಪ್ಯೂಟರ್ ಸಹ ಸುಸ್ಥಿತಿಯಲ್ಲಿ ಇತ್ತು. ನನಗೆ ಫೋಟೋಗಳನ್ನು ತೆಗೆಯುವ ಬಗ್ಗೆ ಮತ್ತು ಅವುಗಳನ್ನು

ಕಂಪ್ಯೂಟರ್ ಗೆ ವರ್ಗಾಯಿಸುವ ಬಗ್ಗೆ ಮತ್ತು ಕಂಪ್ಯೂಟರ್ ನಿಂದ ಸಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

8. ನೀವು ಫೋಟೋಗಳನ್ನು ತೆಗೆದ ಡಿಜಿಟಲ್ ಕ್ಯಾಮೆರಾ ಯಾವ ಕಂಪೆನಿಗೆ ಸೇರಿದ್ದು ಎಂದು ನಿಪಿ.27 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಡಿಜಿಟಲ್ ಕ್ಯಾಮೆರಾದಲ್ಲಿ ಫೋಟೋಗಳನ್ನು ತೆಗೆದರೆ ಅವುಗಳ ಮೇಲೆ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೊಸ ಮಾದರಿಯ ಕ್ಯಾಮೆರಾದಲ್ಲಿ ನಮೂದಾಗುತ್ತದೆ ಆದರೆ ನಾನು ಫೋಟೋಗಳನ್ನು ತೆಗೆದ ಕ್ಯಾಮೆರಾ ಹಳೆಯ ಮಾದರಿಯದ್ದಾಗಿತ್ತು ಎನ್ನುತ್ತಾರೆ. ಸದರಿ ಕ್ಯಾಮೆರಾ ಸೋನಿ ಕಂಪೆನಿಯದ್ದಾಗಿತ್ತು ಆದರೆ ಅದರ ಮಾಡೆಲ್ ಯಾವುದು ಎಂದು ನನಗೆ ನೆನಪಿಲ್ಲ.

9. ಸೋನಿ ಕಂಪೆನಿಯ ಕ್ಯಾಮೆರಾಗಳು ತಯರಾಗಿ ಮಾರುಕಟ್ಟೆಗೆ ಬಿಡುಗಡೆಯಾದಾಗಿನಿಂದಲೂ ಅವುಗಳಲ್ಲಿ ತೆಗೆದ ಫೋಟೋಗಳ ಮೇಲೆ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ನಮೂದಾಗುವ ವ್ಯವಸ್ಥೆ ಇದೆ ಎಂದರೆ ನನಗೆ ಗೊತ್ತಿಲ್ಲ.

10. ನೀವು ಹೇಳಿದಂತೆ ಯಾವುದೇ ಸ್ಥಳಗಳಿಗೆ ಹೋಗಿಲ್ಲ ಮತ್ತು ಅಲ್ಲಿ ನಿಪಿ.3 ರಿಂದ ನಿಪಿ.10 ಮತ್ತು ನಿಪಿ.18 ರಂತೆ

ಯಾವುದೇ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನೀವು ಫೋಟೋಗಳನ್ನು ಡೇಟಾ ಕೇಬಲ್ ಮೂಲಕ ಕಂಪ್ಯೂಟರ್ ಗೆ ವರ್ಗಾಯಿಸಿದ್ದಾಗಿ ನಿಪಿ.27 ರಲ್ಲಿ ನಮೂದಿಸಿಲ್ಲ ಮತ್ತು ಇದೇ ಮೊದಲ ಬಾರಿಗೆ ಆ ವಿಚಾರವನ್ನು ನ್ಯಾಯಾಲಯದಲ್ಲಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾನು ತನಿಖಾಧಿಕಾರಿಗಳಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇನೆ ಎನ್ನುತ್ತಾರೆ.

11. ನೀವು ಫೋಟೋಗಳನ್ನು ವರ್ಗಾಯಿಸಿದ ಸಿಡಿ ಖಾಲಿಯಾಗಿತ್ತು ಎಂದು ನಿಪಿ.27 ರಲ್ಲಿ ನಮೂದಿಸಿಲ್ಲ ಮತ್ತು ಇದೇ ಮೊದಲ ಬಾರಿಗೆ ಆ ವಿಚಾರವನ್ನು ನ್ಯಾಯಾಲಯದಲ್ಲಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಖಾಲಿ ಸಿಡಿಗೆ ವರ್ಗಾಯಿಸಿದ್ದೇನೆ ಎನ್ನುತ್ತಾರೆ. ಸದರಿ ಸಿಡಿ ಯಾವ ಕಂಪೆನಿಯದ್ದು ಮತ್ತು ಅದರ ಕೆಪಾಸಿಟಿ ಎಷ್ಟಿತ್ತು ಎಂದು ನಿಪಿ.27 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಸಿಡಿ ಎಷ್ಟು ಸ್ಟೋರೇಜ್ ಕೆಪಾಸಿಟಿ ಇತ್ತು, ಎಷ್ಟು ಬಳಕೆಯಾಗಿತ್ತು ಎಂದು ನಿಪಿ.27 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

12. ಫೋಟೋಗಳನ್ನು ತೆಗೆದ ಕ್ಯಾಮೆರಾ ಸುಸ್ಥಿತಿಯಲ್ಲಿ ಇತ್ತು, ಆದರೆ ಆ ಬಗ್ಗೆ ನಿಪಿ.27 ರಲ್ಲಿ ನಮೂದು ಮಾಡಿಲ್ಲ. ಡಿಜಿಟಲ್ ಕ್ಯಾಮೆರಾದಲ್ಲಿದ್ದ ಮೆಮೋರಿ ಕಾರ್ಡಿನ ಕೆಪಾಸಿಟಿ ಎಷ್ಟಿತ್ತು, ಎಷ್ಟು ಬಳಕೆಯಾಗಿತ್ತು ಎಂದು ನಿಪಿ.27 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಫೋಟೋಗಳನ್ನು ಪ್ರಿಂಟ್ ಹಾಕಿಸಿದ್ದಾಗಿ ಹೇಳಿದ್ದೀರಿ ಅವುಗಳನ್ನು ಯಾವ ಸ್ಟೂಡಿಯೋದಲ್ಲಿ ಪ್ರಿಂಟ್ ಹಾಕಿಸಲಾಗಿತ್ತು ಎಂದು ನಿಪಿ.27 ರಲ್ಲಿ ನಮೂದು ಮಾಡಿಲ್ಲ

ಮತ್ತು ಆ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ಹೇಳಿದಂತೆ ಯಾವುದೇ ಕರ್ತವ್ಯವನ್ನು ನಿರ್ವಹಿಸದಿದ್ದ ಕಾರಣ ಮೇಲೆ ಹೇಳಿದ ಯಾವುದೇ ವಿಚಾರಗಳನ್ನು ನೀವು ನಿಪಿ.27 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

13. ಫೋಟೋಗಳನ್ನು ತೆಗೆಯಲು ಮತ್ತು ಅವುಗಳನ್ನು ಕಂಪ್ಯೂಟರ್ ಮತ್ತು ಸಿಡಿಗೆ ವರ್ಗಾಯಿಸಲು ನಿಮಗೆ ಯಾವುದೇ ಪರಿಣಿತಿ ಇಲ್ಲ ಎಂದರೆ ಸರಿಯಲ್ಲ. ನಿಮಗೆ ಆ ರೀತಿ ಯಾವುದೇ ಪರಿಣಿತಿ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ